3) ಚಿಕ್ಕಮಗಳೂರು-ಬೆಳಗಾಂ

4) ಚಿಕ್ಕಮಗಳೂರು-ಮಡಿಕೇರಿ

5) ಚಿಕ್ಕಮಗಳೂರು-ಬೀರೂರು(ಗ್ರಾಮೀಣ ಸಾರಿಗೆ)

6) ಚಿಕ್ಕಮಗಳೂರು-ಚಾವಗಲ್-ಬೀರೂರು

ಬೆಳ್ತಂಗಡಿ ತಾಲ್ಲೂಕಿನ ಅಗ್ನಿಶಾಮಕ ದಳ ಕಛೇರಿಗೆ ಕಟ್ಟಡ ಮಂಜೂರಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 68(212)

ಸದಸ್ಯರ ಹೆಸರು ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಪ್ರಶ್ನೆ

1) ಬೆಳ್ತಂಗಡಿ ತಾಲ್ಲೂಕಿನ ಅಗ್ನಿಶಾಮಕ ದಳ ಕಛೇರಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) 2002-03ನೇ ಸಾಲಿನಲ್ಲಿ ಸ್ವಂತ ಕಟ್ಟಡಕ್ಕೆ ಮಂಜೂರಾತಿ ನೀಡಲಾಗುವುದೇ?

3) ಅಗ್ನಿಶಾಮಕ ದಳದ ಇಲಾಖೆಯಲ್ಲಿ ನೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ವಸತಿ ಗೃಹಗಳ ಸೌಲಭ್ಯ ಇಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ?

ಉತ್ತರ

1) ಹೌದು

2) ಹಣಕಾಸಿನ ಲಭ್ಯತೆಗೊಳಪಟ್ಟು 2002-03ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು

3) ಅಗ್ನಿಶಾಮಕ ಸೇವಾ ಇಲಾಖೆಯ 610 ಸಿಬ್ಬಂದಿಗಳಿಗೆ ವಸತಿಗೃಹಗಳ ಸೌಲಭ್ಯವನ್ನು ವಿವಿಧ ಸ್ಥಳಗಳಲ್ಲಿ ಒದಗಿಸಲಾಗಿದೆ